ಎಂದುಕೊಂಡ. ಅವರು ತೀರ ತಡರಾತ್ರಿಯತನಕವೂ ಬಾಗಿಲು ತೆರೆದು ಕೂರುತ್ತಿದ್ದುದರಿಂದ ಇನ್ನೂ ಎದ್ದಿಲ್ಲವೇನೋ ಎಂಬ ಯೋಚನೆ ಬಂದಿತು. 'ಬ್ರೆಡ್ ಇದೆಯೇ?' ಎಂದವನು ಪ್ರಶ್ನಿಸಿದ. ಆಕೆ ಬಗ್ಗಿ ಗಾಜಿನ ಕಪಾಟಿನ ಒಳಗೆಲ್ಲ ಪರೀಕ್ಷಿಸಿ, 'ಇಲ್ಲ. ಮುಗಿದು ಹೋಗಿದೆ. ಖಾರಾ ಬನ್ ಇದೆ' ಎಂದಳು. ಒಂದು ಕ್ಷಣ ತಡೆದು ಅವನು, 'ನೀವು ಅಯ್ಯಂಗಾರರ ಮಗಳೇ?' ಎಂದು ವಿಚಾರಿಸಿದ. ಅವಳ ಕಣ್ಣುಗಳು ಹೊಳಪುಗೊಂಡವು. 'ಅಲ್ಲ. ನಾನು ಅವರ ಹೆಂಡತಿ' ಎಂದಳವಳು. ಅವನ ಬಾಯಿಯಿಂದ 'ಓಹ್' ಅಂತ ಉದ್ಗಾರ ಹೊರಟಿತು. 'ಖಾರಾ ಬನ್ನೇ ಕೊಡಿ' ಎಂದ ಅವನು. 'ಎರಡೆ ಎರಡು ಇರೋದು. ಎರಡನ್ನೂ ಕೊಡಲೇ?' ಎಂದು ಕೇಳಿದಳು.

